**ಕ್ರಿ.ಮಿಸ್. ನಂ. 382 /2016**
**ಪಿ.ಡಬ್ಲೂ : 1**

**ದಿನಾಂಕ: 10-06-2025 ರಂದು ಸಾಕ್ಷಿದಾರನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆ : ಶ್ರೀಮತಿ.ಬಿ.ಎಂ.ಆರ್. ವಕೀಲರಿಂದ :**

ನಾನು ನನ್ನ ಮಗನ ಶಾಲೆಯ ಫೀ ಕಟ್ಟಿದ ರಶೀದಿಗಳನ್ನು ಹಾಜರು ಪಡಿಸಿದ್ದು ಅವುಗಳನು ನಿಪಿ-79 ರಿಂದ 82 ಎಂದು ಗುರುತಿಸಲಾಯಿತು.

**ಪಾಟೀ ಸವಾಲು: ಶ್ರೀ.ವಾಯ್.ಎಸ್.ವಾಯ್. ವಕೀಲರಿಂದ :**

ನಾನು ಶಾಲೆಯ ಪ್ರಾಂಶುಪಾಲರಿಗೆ ಹಣ ನೀಡಿ ರಶೀದಿಗಳನ್ನು ತಂದಿರುತ್ತೇನೆ ಎಂದರೆ ಸಾಕ್ಷಿಯು ನಾನು ಹಣ ಕೊಟ್ಟಿದ ನಂತರ ರಶೀದಿ ಕೊಟ್ಟಿರುತ್ತಾರೆ ಅದನ್ನು ಹಾಜರು ಪಡಿಸಿರುತ್ತೇನೆ ಎಂದು ನುಡಿದಿರುತ್ತಾರೆ. ನಾನು ಚನ್ನಬಸವೇಶ್ವರ ಗುರುಕಲ್ ಶಾಲೆಯ ರಶೀದಿಗಳನ್ನು ಹಾಜರು ಪಡಿಸಿರುತ್ತೇನೆ. ನನ್ನ ಮಗ ಶಹಾಪೂರದಲ್ಲಿ ಓದುತ್ತಿದ್ದಾನೆ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಎಲ್ಲಾ ಅನುಕೂಲ ಇದಿದ್ದರಿಂದ ನಾನು ಶಾಲೆಯ ಫೀಯನ್ನು ಕಟ್ಟಿರುತ್ತೇನೆ ಎಂದರೆ ಸಾಕ್ಷಿಯು ನಾನು ಬೇರೆಯವರ ಮನೆಯಲ್ಲಿ ಕಸ, ಮುಸೂರಿ ಮಾಡಿ ಮಗನ ಫೀ ತುಂಬುತ್ತಿದ್ದೇನೆ ಎಂದು ನುಡಿದಿರುತ್ತಾರೆ. ನಾನು ನನ್ನ ಅಕ್ಕ ಪಕ್ಕದ ಮನೆಯಲ್ಲಿ ಕಸ, ಮೂಸುರಿ ಕೆಲಸ ಮಾಡುತ್ತೇನೆ. ನಾನು ಮಲ್ಲಮ್ಮ, ರೇಣುಕಾ, ಶರಣಮ್ಮ, ಅಂಜಮ್ಮ ರವರ ಮನೆಯಲ್ಲಿ ಕೆಲಸ ಮಾಡುತ್ತೇನೆ. ಒಬ್ಬಬ್ಬೊರು 4 ಸಾವಿರ ಕೊಡುತ್ತಾರೆ. ನನಗೆ ತಿಂಗಳಿಗೆ 12 ರಿಂದ 15 ಸಾವಿರ ಬರುತ್ತದೆ.

ಮರು ವಿಚಾರಣೆ ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

**ಓ. ಹೇ. ಕೇ. ಸರಿ ಇದೆ.**

**ಪ್ರಧಾನ ಜೆ.ಎಂ.ಎಫ್.ಸಿ.**
**ಶಹಾಪೂರ**